ನಿಯಂತ್ರಕ ಹಾಗೂ ಮಹಾಲೇಖ ಪರೀಕ್ಷಕರವರ ವರದಿ (ನಂ.3 ಸಿವಿಲ್)

ಅಧ್ಯಕ್ಷರು:- ಸಭೆಯ ಮುಂದಿಡಲಾಯಿತು.

ವರದಿಗಳನ್ನೊಪ್ಪಿಸುವುದು.

ಶ್ರೀ ಚಂದ್ರಶೇಖರ ಮಾಮನಿ (ಅಧ್ಯಕ್ಷರು, ಖಾಸಗಿ ಸದಸ್ಯರುಗಳ ವಿಧೇಯಕಗಳು ಮತ್ತು ನಿರ್ಣಯಗಳ ಸಮಿತಿ ಹಾಗೂ ಉಪಾಧ್ಯಕ್ಷರು, ಕರ್ನಾಟಕ ವಿಧಾನ ಸಭೆ) ಮಾನ್ಯ ಅಧ್ಯಕ್ಷರೇ, ಖಾಸಗಿ ಸದಸ್ಯರುಗಳ ವಿಧೇಯಕಗಳು ಮತ್ತು ನಿರ್ಣಯಗಳ ಸಮಿತಿಯ ಮೊದಲನೇ ವರದಿಯನ್ನು ಸಭೆಯ ಮುಂದೆ ಒಪ್ಪಿಸುತ್ತೇನೆ.

ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್ (ಅಧ್ಯಕ್ಷರು, ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖಾ ವಿಷಯ ಸಮಿತಿ):- ಮಾನ್ಯ ಅಧ್ಯಕ್ಷರೇ, ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಳ 1996-97ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ಪ್ರಥಮ ವರದಿಯನ್ನು ಸಭೆಯ ಮುಂದೆ ಒಪ್ಪಿಸುತ್ತಿದ್ದೇನೆ.

ಶ್ರೀ ಡಿ.ಆರ್.ಪಾಟೀಲ್ (ಅಧ್ಯಕ್ಷರು, ಸಹಕಾರ ಇಲಾಖಾ ವಿಷಯ ಸಮಿತಿ):- ಮಾನ್ಯ ಅಧ್ಯಕ್ಷರೇ, ಸಹಕಾರ ಇಲಾಖೆಯ 1996-97ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ಪ್ರಥಮ ವರದಿಯನ್ನು ಸಭೆಯ ಮುಂದೆ ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು:- ವರದಿಗಳನ್ನೊಪ್ಪಿಸಲಾಯಿತು.

ಅಧ್ಯಕ್ಷರು:- ಮಾನ್ಯ ಎಲ್ಲಾ ಸದಸ್ಯರಲ್ಲಿ ಹಾಗೂ ಮಂತ್ರಿವರ್ಯರಲ್ಲಿ ನನ್ನದೊಂದು ವಿನಂತಿ ಇದೆ. ಇವತ್ತೂ ಕೂಡ ಪ್ರಶ್ನೋತ್ತರ ಅವಧಿಯನ್ನು ಒಂದು ಗಂಟೆಗಿಂತ ಹೆಚ್ಚು ಅವಧಿಯಲ್ಲಿ ನಡೆಸಬೇಕಾಗಿ ಬಂತು. ಸೋಮವಾರದಿಂದ ಯಾವುದೇ ಪ್ರಶ್ನೆಗೆ ಒಂದು ಅಥವಾ ಎರಡು ಉಪ ಪ್ರಶ್ನೆಗಳಿಗೆ ಮಾತ್ರ ನಾನು ಅವಕಾಶ ಮಾಡಿಕೊಡುತ್ತೇನೆ. ಹೆಚ್ಚು ಉಪ ಪ್ರಶ್ನೆಗಳಿಗೆ ಅವಕಾಶ ಮಾಡಿಕೊಡುವುದಕ್ಕಾಗುವುದಿಲ್ಲ. ದಯವಿಟ್ಟು ಯಾವುದೇ ಸದಸ್ಯರುಗಳು ಇದರ ಬಗ್ಗೆ ಅನ್ಯಥಾ ಭಾವಿಸಬಾರದಾಗಿ ಕೋರುತ್ತೇನೆ. ಉಪ ಪ್ರಶ್ನೆಗಳನ್ನು ಕೇಳತಕ್ಕ ಮಾನ್ಯ ಸದಸ್ಯರುಗಳು ಸಂಕ್ಷಿಪ್ತವಾಗಿ, ಭಾಷಣಗಳನ್ನು ಮಾಡದೇ, ಪ್ರಶ್ನೆಗಳನ್ನು ಮೊದಲೇ ರೂಪಿಸಿಕೊಂಡು ಕೇಳಬೇಕು. ಇದು ಒಂದು ರೀತಿಯ ಕಲೆ. ಮಾನ್ಯ ಮಂತ್ರಿಗಳಲ್ಲೂ ನಾನು ವಿನಂತಿ ಮಾಡಿಕೊಳ್ಳುತ್ತೇನೆ, ದಯಮಾಡಿ ತಮ್ಮಲ್ಲಿ ಮಾಹಿತಿ ಬಹಳವಾಗಿ ಇರುತ್ತದೆ, ಅದನ್ನು ಬೇಡಿಕೆಗಳು ಅಥವಾ ಬೇರೆ ವಿಷಯಗಳು ಬಂದಾಗ ತಾವು ಹೇಳಬಹುದು. ತಾವೂ ಕೂಡ ಭಾಷಣ ಮಾಡದೇ ಸಂಕ್ಷಿಪ್ತವಾಗಿ ಉತ್ತರಗಳನ್ನು ಕೊಟ್ಟರೆ ಸದನದ ಸಮಯ ಉಳಿಯುತ್ತದೆ, ನನಗೆ ಪ್ರಶ್ನೋತ್ತರವನ್ನು ನಿಗದಿತ ಅವಧಿಯಲ್ಲಿ ಮುಗಿಸುವುದಕ್ಕೆ ಅನುಕೂಲವಾಗುತ್ತದೆ. ಎಲ್ಲಾ ಸದಸ್ಯರುಗಳು ಮತ್ತು ಮಂತ್ರಿಗಳು ಸಹಕರಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತಿದ್ದೇನೆ.